## ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ

ಸಿ.ಸಿ. ನಂ.4735-2023
ಸಿ.ಡಬ್ಲ್ಯೂ -5 ಪಿ.ಡಬ್ಲ್ಯೂ -4

| | | |
|---|---|---|
| ಸಾಕ್ಷಿಯ ಹೆಸರು | - | ಮುನ್ನಿ@ ಮುನ್ನಾ |
| ಗಂಡನ ಹೆಸರು | - | ಶಿವಾನಂದ |
| ವಯಸ್ಸು | - | 45 ವರ್ಷ |
| ಉದ್ಯೋಗ | - | ಮನೆಕೆಲಸ |
| ವಾಸ | - | ಹುಮನಾಬಾದ. |

ದಿನಾಂಕಃ 02-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ಚಾಸಾ-1 ನನ್ನ ಗಂಡ, ಚಾಸಾ.6 & 7 ರವರ ಪರಿಚಯ ಇರುತ್ತದೆ. ಆರೋಪಿತನ ಪರಿಚಯ ಇರುತ್ತದೆ.

ದಿ: 19.04.2023 ರಂದು ರಾತ್ರಿ 8.00 ಗಂಟೆಗೆ ನಮ್ಮ ಮನೆಯ ಮುಂದೆ ನಾನು & ಚಾಸಾ.7 ರವರು ನಿಂತಾಗ ಚಾಸಾ.1 ರವರು ಹೊರಗಡೆ ಹೋಗುವಾಗ ನಿವ್ ಅಪೋಸ್ತಿಲಿಕ ಚರ್ಚ ಹತ್ತಿರ ಚಾಸಾ.1 & ಆರೋಪಿತರ ನಡುವೆ ಜಗಳ ಆಗಿತ್ತು. ಆವಾಗ ಆರೋಪಿತನು ಚಾಸಾ.1 ರವರಿಗೆ ಸೂಳೇ ಮಗನೆ, ರಂಡಿ ಮಗನೆ ಅಂತಾ ಬೈದಿರುತ್ತಾನೆ. ಕೈಯಿಂದ ಎದೆಗೆ & ಹೊಟ್ಟೆಯಲ್ಲಿ ಹೊಡೆದು, ಕಬ್ಬಿಣದ ಪಂಚ ಹಚ್ಚಿ ತಲೆಗೆ ಹೊಡೆದಿರುತ್ತಾನೆ, ನಾನು & ಚಾಸಾ.6 & 7 ರವರು ಜಗಳವನ್ನು ನೋಡಿ ಬಿಡಿಸಿಕೊಂಡಿರುತ್ತೇವೆ. ಆಗ ಆರೋಪಿತನು ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿನಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೇದರಿಕೆ ಹಾಕಿರುತ್ತಾನೆ. ಈ ವಿಚಾರವಾಗಿ ಚಾಸಾ.1 ರವರು ದೂರು ನೀಡಿದ್ದು ನಾನು ಹೇಳಿಕೆ ನೀಡಿರುತ್ತೇನೆ.

ಮು.ಮಾ.ನ್ನು & ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು:ಶ್ರೀ. ಆರ್.ಜೆ.ಎನ್. ಆರೋಪಿ ಪರ ವಕೀಲರಿಂದಃ

ನಾವು ಮನೆಯಲ್ಲಿ ತೀರ್ಮಾನ ಕೈಗೊಳ್ಳಬೇಕಾದರೆ ಸಾಮಾನ್ಯವಾಗಿ ಗಂಡ ಹೆಂಡತಿ ಮಾತನಾಡಿ ನಮ್ಮ ಗಂಡನ ಮಾತೆ ಅಂತಿಮವಾಗುತ್ತದೆ. ವಿಜಯಕುಮಾರ ನಿಮ್ಮ ಸೋದರ ಎಂದರೆ ಸಾಕ್ಷಿಯು ನಮ್ಮ ಚಿಕ್ಕಪ್ಪನ ಮಗ ಇರುತ್ತಾನೆ ಎಂದು ನುಡಿಯುತ್ತಾರೆ. ಆರೋಪಿ ವಿಜಯಕುಮಾರ ಮೇಲೆ ಒಂದು ಪ್ರಕರಣ ದಾಖಲಿಸಿದ ಬಗ್ಗೆ ನನಗೆ ಗೊತ್ತು ಇರುತ್ತದೆ. ಸದರಿ ಪ್ರಕರಣ ಇದೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುತ್ತದೆ ಎಂದರೆ ಸರಿ. ಈ ಪ್ರಕರಣ ದಾಖಲಾಗುವ ಮೊದಲು 5-6 ತಿಂಗಳು ಮುಂಚೆ ಸದರಿ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯಿಂದ ಚಾಸಾ.1 ರವರು ಅವರ ಸ್ನೇಹಿತರಿಗೆ ರೂ.5000/- ಹಣವನ್ನು ಪಡೆದಿದ್ದನು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಹಣವನ್ನು ಮರು ಪಾವತಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಹಣವನ್ನು ಆರೋಪಿ ಹಾಗೂ ವಿಜಯಕುಮಾರ ರವರ ನಡುವೆ ಜಗಳ ಆಗಿಂದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಯಾವುದೇ ಹಣವನ್ನು ಪಡೆದಿಲ್ಲ ಎಂದು ನುಡಿಯುತ್ತಾರೆ. ಅಂದಾಜು 10 ತಿಂಗಳ ಹಿಂದೆ ನಮ್ಮ ಓಣಿಯ ನವೀನ ತಂದೆ ಹಣಮಂತ ಅವರಿಂದ ನನ್ನ ಗಂಡ ಅವರ ಮಿತ್ರರರಿಗೆ ರೂ.5000/-ನ್ನು ಕೊಡಿಸಿರುತ್ತಾನೆ ಎಂದು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ಹಣವನ್ನು ಆರೋಪಿ ನಿಮ್ಮ ಮನಗೆ ಬಂದು ಕೊಡಬೇಕು ಎಂದು 4-5 ಬಾರಿ ಕೇಳೀರುತ್ಥಾನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಯಾವುದೇ ದುಡ್ಡು ಕೊಡುವುದಿಲ್ಲ ಎಂದು ಹೇಳಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿ & ನಮ್ಮ ಮನೆ ಒಂದೆ ಓಣಿಯಲ್ಲಿರುತ್ತದೆ ಎಂದರೆ ಸಾಕ್ಷಿಯು ಮುಂದಿನ ಓಣಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿ ತಮ್ಮ ಮನೆಗೆ ನಡೆದುಕೊಂಡು ಹೋಗಬೇಕೆಂದರೆ ಸರಿ. ನೀವು ಚಾಸಾ.1 ಹಾಘೂ 6 ರವರು ಆರೋಪಿಗೆ ಯಾವುದೇ ಹಣ ಕೊಡುವುದಿಲ್ಲ ಎಂದು ಅವರನ್ನೇ ತಡೆಹಿಡಿದು ನೀವೆ ಜಗಳ ಮಾಡಿದ್ದಿರಿ ಎಂದರೆ ಸರಿಯಲ್ಲ. ಆಗ ಓಣಿ ಜನ ಬಂದು ನೀವು ಆರೋಪಿಗೆ ಹಣ ಕೊಡಬೇಕೆ ಎಂದು ಬುದ್ದಿವಾದ ಹೇಳಿ ಆರೋಪಿಗೆ ಪ್ರಕರಣ ದಾಖಲಿಸದಂತೆ ಬುದ್ದಿ ಹೆಳೀರುತ್ಥರೆ ಎಂದರೆ ಸರಿಯುಲ್ಲ. ಆ ಕಾರಣಕ್ಕಾಗಿ ನೀವು ಹೊಡಬಡೆ ಮಾಡಿದರು ಸಹ ಆರೋಪಿ ವಿರುದ್ಧ ಪ್ರಕರಣ ದಾಖಲು ಮಾಡಿಲ್ಲ ಎಂದರ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಅವರಿಗೆ ಹಣವನ್ನು ಕೊಡುವುದು ತಪ್ಪಿಸಿಕೊಳ್ಳಲು ಹಾಗೂ ವಿಜಯಕುಮಾರ ರವರ ವಿರುದ್ಧ ನೀಡಿದ ದೂರನ್ನು ವಾಪಸ ಪಡೆಯಬೇಕೆಂಬ ಉದ್ದೇಶದಿಂದ ಆರೋಪಿ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ಧೇನೆ ಎಂದರೆ ಸರಿಯಲ್ಲ. ಆರೋಪಿ ಚಾಸಾ.1 ರವರಿಗೆ ಮು.ಮಾ.ರಿಂದ ಹೊಡೆದಿಲ್ಲ, ಅಕ್ರಮವಾಗಿ ತಡೆದು ನಿಲ್ಲಿಸಿದ್ಧ

ಅವಾಚ್ಯವಾಗಿ ಬೈದಿಲ್ಲ, ಜೀವ ಬೇದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಎದುರುಗಡೆ ತಂಗಿಮ್ಮ ಗಂಡ ರಾಜಪ್ಪ ಎಂಬುವರ ಮನೆ ಇರುತ್ತದೆ ಎಂದರೆ ಸರಿ. ಹಾಗೂ ಚರ್ಚು ಇರುವುದರಿಂದ ಸಾಕಷ್ಟು ಜನರು ಸೇರಿರುತ್ತಾರೆ ಎಂದರೆ ಸಾಕ್ಷಿಯು ಆ ದಿನ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆದಾಗ ಸುಮಾರು 6-7 ಜನ ಸೇರಿದ್ದರು. ಆರೋಪಿ ಆ ದಿನ ನಿಮ್ಮ ಮನೆಗೆ ಬಂದಿಲ್ಲ ಯಾವುದೆ ಜಗಳ ತೆಗೆದಿಲ್ಲ ಎಂದರೆ ಸರಿಯಲ್ಲ. ಎಂ.ಓ.1 ಸ್ಟೀಲ ಇರುತ್ತದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.